**ಸಾಕ್ಷಿಗೆ ದಿನಾಂಕ 25-02-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ ಟಿ ವಿ ಆರ್ ವಕೀಲರಿಂದಃ**

1. ಕಳೆದ ಎರಡೂವರೆ ತಿಂಗಳಿನಿಂದ ಎರಡನೇ ಎದುರುದಾರರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ದಾಖಲೆಗಳ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಈ ಪ್ರಕರಣದ ಕುರಿತು ನಮ್ಮ ಕಂಪನಿಯಿಂದ ತನಿಖೆ ಮಾಡಿಸಲಾಗಿದೆ. ಈಗ ಸದ್ಯಕ್ಕೆ ಸದರಿ ತನಿಖಾ ವರದಿ ನನ್ನ ಬಳಿ ಇರುವುದಿಲ್ಲ. ತನಿಖಾಧಿಕಾರಿಯ ಹೆಸರನ್ನು ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ. ಸದರಿ ವರದಿ ಅವಶ್ಯಕತೆ ಇದೆ ಎಂದರೆ ನಾನ ಹಾಜರುಪಡಿಸುತ್ತೇನೆ.

2. ಅಪಘಾತದ ಸಮಯದಲ್ಲಿ ಯಾರು ಚಾಲಕರಾಗಿದ್ದರು ಎಂದು ವಿವಾದವಿದೆ ಎಂದರೆ ಸರಿ. ಚಾಲಕರ ಗುರುತು ವಿವಾದದಲ್ಲಿರುವುದರಿಂದ ಪೊಲೀಸ್ ತನಿಖೆ ಹೊರತುಪಡಿಸಿ ವಿಮಾ ಕಂಪನಿಯಿಂದ ಪ್ರತ್ಯೇಕ ತನಿಖೆ ಮಾಡಿಸಬೇಕಾಗಿತ್ತು ಎಂದರೆ ಸರಿಯಲ್ಲ. ಎಲ್ಲಾ ಪೊಲೀಸ್ ದಾಖಲೆಗಳಲ್ಲಿ ನಾಗರಾಜ್ ಎನ್ನುವವರು ಚಾಲಕರಾಗಿದ್ದರು ಎಂದು ನಮೂದಾಗಿರುವ ಕಾರಣ ನಾವು ಸಹ ನಾಗರಾಜ್ ಚಾಲಕನಾಗಿದ್ದನು ಎಂದು ಹೇಳಿತ್ತಿದ್ದೇವೆ ಎಂದರೆ ಸರಿ. ನಮ್ಮ ಲಿಖಿತ ಹೇಳಿಕೆಯಲ್ಲಿ ಸಹಜವಾಗಿ ಬಸವರಾಜು ಚಾಲಕನಾಗಿರಲಿಲ್ಲ ಎಂದು ಹೇಳಿದ್ದನ್ನು ಹೊರತುಪಡಿಸಿದರೆ ನಿಖರವಾಗಿ ರುಜುವಾತುಪಡಿಸಬಲ್ಲ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. ಒಂದನೇ ಎದುರುದಾರರು ಖಾಸಗಿ ಸಾರಿಗೆ ಸಂಸ್ಥೆ ಎಂದರೆ ಸರಿ. ಒಂದನೇ ಎದುರುದಾರರ ಕಂಪನಿಯಲ್ಲಿ ಎಷ್ಟು ವಾಹನಗಳಿವೆ ಮತ್ತು ಎಷ್ಟು ನೌಕರರು ಇದ್ದಾರೆ

ಎಂದರೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಾನು ಪೊಲೀಸ್ ದಾಖಲೆಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ಎಸ್.ರಮಣ್ ರವರು ನರ್ಸಂಗಿ ಪೊಲೀಸ್ ಠಾಣೆಗೆ ದೂರ ನೀಡಿರುತ್ತಾರೆ ಎಂದರೆ ಸರಿ. ಎಸ್.ರಮಣ್ ರವರು ತಮ್ಮ ಕಂಪನಿಯ ಮುಖ್ಯ ಕಛೇರಿಯಿಂದ ಅಪಘಾತದ ಕುರಿತು ಮಾಹಿತಿ ಪಡೆದು ದೂರು ಸಲ್ಲಿಸಿರುತ್ತಾರೆ ಎಂದರೆ ಸದರಿ ವಿಚಾರ ಪ್ರಥಮ ವರ್ತಮಾನ ವರದಿಯಲ್ಲಿ ನಮೂದಿಸಿರುತ್ತಾರೆ. ಸದರಿ ಎಸ್.ರಮಣ್ ರವರಿಗೆ ಲಾರಿಯ ಚಾಲಕ ಮತ್ತು ಕ್ಲಿನರ್ ಯಾರು ಎಂದು ಗೊತ್ತಿರಲಿಲ್ಲ ಎಂದರೆ ಸರಿ.

4. ಅಪಘಾತದ ಸ್ಥಳವು ಬೆಂಗಳೂರಿನಿಂದ 700 ಕೀ.ಮೀ ಅಂತರದಲ್ಲಿದೆ ಎಂದರೆ ಸರಿ. ಅಪಘಾತದಲ್ಲಿ ಲಾರಿ ಸಂಪೂರ್ಣವಾಗಿ ಸುಟ್ಟು ಹೋಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಲಾರಿಯ ಸ್ವಲ್ಪ ಭಾಗ ಇತ್ತು ಎಂದು ನುಡಿಯುತ್ತಾರೆ. ಪ್ರಥಮ ವರ್ತಮಾನ ವರದಿಯ ಪ್ರಕಾರ ಚಾಲಕನ ಕ್ಯಾಬಿನ್ ಸ್ವಲ್ಪ ಭಾಗದಲ್ಲಿ ಕಾಣುವ ಸ್ಥಿತಿಯಲ್ಲಿತ್ತು. ಸಾಮಾನ್ಯವಾಗಿ ವಾಹನಕ್ಕೆ ಬೆಂಕಿ ಹತ್ತಿಕೊಂಡ ಸಂದರ್ಭದಲ್ಲಿ ವಾಹನದಲ್ಲಿದ್ದವರು ತಪ್ಪಸಿಕೊಳ್ಳಲು ಪ್ರಯತ್ನಿಸುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ಪ್ರಕರಣದಲ್ಲಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿರುವುದಿಲ್ಲ ಎಂದು ನುಡಿಯುತ್ತಾರೆ.

5. ದೂರುದಾರ ಎಸ್.ರಮಣ್ ರವರು ಬಸವರಾಜುರವರು ಬೆಳ್ಳಿಯ ಚೈನನ್ನು ಧರಿಸಿದ್ದರು ಎಂದು ಹೇಳಿರುತ್ತಾರೆ ಎಂದರೆ ಸರಿ. ಸದರಿ ದೂರುದಾರರಿಗೆ ಲಾರಿ ಬೆಂಗಳೂರಿನಿಂದ ಹೊರಟಾಗ ಬಸವರಾಜುರವರ ಬಳಿ ಯಾವ ವಸ್ತುಗಳು ಇದ್ದವು ಮತ್ತು ಯಾವುಗಳನ್ನು ಧರಿಸಿದ್ದರು ಎಂದು ಮಾಹಿತಿ ಇರಲಿಲ್ಲ ಎಂದರೆ ಸರಿ. ಪೊಲೀಸ್

ದಾಖಲೆಗಳಲ್ಲಿ ದೂರುದಾರರು ಯಾವ ಆಧಾರದ ಬಸವರಾಜುರವರು ಬೆಳ್ಳಿಯ ಚೈನನ್ನು ಧರಿಸಿದ್ದರು ಎಂದು ಹೇಳಿರುತ್ತಾರೆ ಎಂದು ನಮಾದು ಮಾಡಿರುವುದಿಲ್ಲ ಎಂದರೆ ಸರಿ.

6. ಅಪಘಾತದ ನಂತರ ಬಸವರಾಜುರವರ ಶವ ಪಂಚನಾಮೆಯನ್ನು ಮಾಡಿದ್ದು ಯಾವ ಸ್ಥಳದಲ್ಲಿ ಶವ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ದಾಖಲೆ ನೋಡಿ ಹೇಳಬೇಕು. ಒಂದು ವೇಳೆ ಮೃತ ಬಸವರಾಜುರವರ ಕೊರಳಲ್ಲಿ ಬೆಳ್ಳಿಯ ಚೈನ್ ಕಂಡು ಬಂದಿದ್ದರೆ ಅದನ್ನು ಪೊಲೀಸರು ಜಪ್ತಿ ಮಾಡುತ್ತಿದ್ದರು ಎಂದರೆ ಸರಿ. ನಿಪಿ.7 ದೋಷಾರೋಪಣಾಪಟ್ಟಿಯ 11 ಕಂಡಿಕೆಯಲ್ಲಿ ಜಪ್ತಿ ಪಡಿಸಿಕೊಂಡ ವಸ್ತುಗಳ ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಎಂದರೆ ಸರಿ. ಪೊಲೀಸರು ದೋಷಾರೋಪಣಾಪಟ್ಟಿಯ 11 ನೇ ಕಂಡಿಕೆಯಲ್ಲಿ ಜಪ್ತಿ ಪಡಿಸಿಕೊಂಡ ವಸ್ತುಗಳ ಬಗ್ಗೆ ಯಾವುದೇ ನಮೂದು ಮಾಡದೇ ಇರುವುದರಿಂದ ಮೃತ ಬಸವರಾಜುರವರು ಬೆಳ್ಳಿಯ ಚೈನ್ ಧರಿಸಿರಿಲಿಲ್ಲ ಎಂದರೆ ಸರಿಯಲ್ಲ.

7. ಮೃತ ಬಸವರಾಜುರವರು ಶವ ಪರೀಕ್ಷೆಯಾದ ನಂತರ ಕರ್ನಾಟಕದಲ್ಲಿರುವ ಆತನ ರಕ್ತ ಸಂಬಂಧಿಕರಿಗೆ ಶವವನ್ನು ಹಸ್ತಾಂತರಿಸಲಾಗಿದೆ ಎಂದರೆ ಸರಿ. ಆ ಸಮಯದಲ್ಲಿ ಮೃತನ ಹೆಂಡತಿ ನಾಗರತ್ನ ರವರು ಅಪಘಾತದ ಸ್ಥಳಕ್ಕಾಗಲೀ ಅಥವಾ ಸಂಬಂಧಿಸಿದ ಪೊಲೀಸರ ಮುಂದೆ ಹೇಳಿಕೆ ನೀಡಲು ಹೋಗಿರುವುದಿಲ್ಲ ಎಂದರೆ ಸರಿ. ದೂರುದಾರ ಹೇಳಿಕೆಯ ಸಾಕ್ಷಿಯೆಂದರೆ ಸರಿ.

8. ಒಂದನೇ ಎದುರುದಾರರು ನಮ್ಮ ವಿಮಾ ಕಂಪನಿಯಿಂದ ಲಾರಿ ಸಂಖ್ಯೆ ಕೆಎ-04-ಎಸಿ-5818 ಗೆ ಪ್ಯಾಕೇಜ್ ವಿಮಾ ಪಾಲಿಸಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಪಾಲಿಸಿಯಡಿಯಲ್ಲಿ ಒಂದನೇ ಎದುರುದಾರರು ಚಾಲಕ ಮತ್ತು ಕ್ಲಿನರ್ ಗೆ ಸಂಬಂಧಿಸಿದಂತೆ

ತಲಾ ರೂ.25/- ಗಳಂತೆ ರೂ.50/- ಪ್ರಿಮಿಯಂ ನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿ. ಅದರಂತೆ ಕೂಲಿ-ಕಾರ್ಮಿಕರಿಗೂ ಸಹ ತಲಾ ರೂ.25/- ಪ್ರಿಮಿಯಂ ನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿ.

9. ಮೃತಪಟ್ಟ ವ್ಯಕ್ತಿಯ ಹೆಸರಿನಲ್ಲಿ ಚಾಲನಾ ಪರವಾನಗಿ ಪತ್ರವನ್ನು ಪಡೆಯಲು ಬರುವುದಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಒಂದನೇ ಎದುರುದಾರರು ಲಾರಿಗೆ ಆಗಿರುವ ನಷ್ಟಕ್ಕೆ ಸಂಬಂಧಿಸಿದಂತೆ ಪರಿಹಾರ ಪಡೆದುಕೊಂಡಿರುತ್ತಾರೆ ಎಂದರೆ ನಮ್ಮ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ಸದರಿ ವಿಚಾರವಾಗಿ ನಮ್ಮ ಕಂಪನಿಯ ಒಡಿ ವಿಭಾಗದಲ್ಲಿ ಮಾಹಿತಿ ಪಡೆಯಬಹುದು ಎಂದರೆ ಸರಿ. ಅಪಘಾತದ ಸಮಯದಲ್ಲಿ ಬಸವರಾಜುರವರು ಲಾರಿಯನ್ನು ಚಾಲನೇ ಮಾಡುತ್ತಿದ್ದ ಕಾರಣ ನಮ್ಮ ವಿಮಾ ಕಂಪನಿಯವರು ಲಾರಿಗೆ ಉಂಟಾದ ಜಖಂಗಳಿಗೆ ಸಂಬಂಧಿಸಿದಂತೆ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಪರಿಹಾರ ನೀಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ನೇ ಎದುರುದಾರರು ಏಕ-ಪಕ್ಷೀಯ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.
ಪಾಟೀ ಸವಾಲುಃ 3 ನೇ ಮತ್ತು 4 ನೇ ಎದುರುದಾರರನ್ನು ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು, ಗೈರುಹಾಜರಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು-ವಿಚಾರಣೆಃಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**